> ಒಳ್ಳೆಯ ಸಿನಿಮಾಗಳೇನೋ ಬರುತ್ತಿವೆ. ನೋಡಲು ಜನರನ್ನು ಥಿಯೇಟರ್‌ಗೆ ಕರೆತರುವ ಪ್ರಯತ್ನಗಳು ನಡೆಯಬೇಕು. ಅದಕ್ಕೆ ತಾರೆಗಳ ಬೆಂಬಲ ಬೇಕು. ಇಲ್ಲವಾದರೆ ಮುಂದಿನ ದಿನಗಳಲ್ಲಿ ಟೀವಿ, ಮೊಬೈಲ್‌ಗಳಲ್ಲೇ ಸಿನಿಮಾಗಳನ್ನು ನೋಡಿಕೊಂಡು ಇರಬೇಕಾಗುತ್ತದೆ'
>
> **-ಭಾ.ಮ. ಹರೀಶ್,** ನಿರ್ಮಾಪಕ



ತೋಡಿಕೊಂಡಿದ್ದನ್ನು ವಸ್ತುಸ್ಥಿತಿಗೆ ಉದಾಹರಣೆಯಾಗಿ ಕೊಟ್ಟರು.

ಇತ್ತೀಚೆಗೆ ಕಮರ್ಷಿಯಲ್ ಸಿನಿಮಾಗಳಲ್ಲಿಯೇ ನಡೆಯುತ್ತಿರುವ ಪ್ರಯೋಗದ ಭಾಗವಾಗಿ ಗುರುತಿಸಿಕೊಂಡಿರುವ ನಟಿಯರಲ್ಲಿ ಚೈತ್ರಾ ಆಚಾರ್ ಪ್ರಮುಖರು. ಈ ಕಾಲದ ಸಮಸ್ಯೆಗಳಿಗೆ ಅವರ ಮಿಲೇನಿಯಲ್ ಮನಸ್ಸು ಕೊಡುವ ವ್ಯಾಖ್ಯಾನ ಬೇರೆಯದೇ ಬಗೆಯದ್ದಾಗಿದೆ.

ಇತ್ತೀಚೆಗೆ ತೆರೆಕಂಡ 'ಬ್ಲಿಂಕ್' ಚಿತ್ರವನ್ನು ಬಿಡುಗಡೆ ಮಾಡಲು ಪ್ರಯತ್ನ ಹಾಕಿದವರಲ್ಲಿ ಅವರೂ ಇದ್ದರು. ನಿರ್ದೇಶಕರಾದ ಶ್ರೀನಿಧಿ ಬೆಂಗಳೂರು ಹಾಗೂ ನಿರ್ಮಾಪಕರಾದ ರವಿಚಂದ್ರ ಎ.ಜೆ. ಚಿತ್ರವನ್ನು ಬಿಡುಗಡೆ ಮಾಡಲು ಪಟ್ಟ ಪಡಿಪಾಟಲನ್ನು ಚೈತ್ರಾ ಎಳೆಎಳೆಯಾಗಿ ಬಿಡಿಸಿ ಇಡುತ್ತಲೇ, ತಮ್ಮ ವ್ಯಾಖ್ಯಾನಕ್ಕೆ ಚೌಕಟ್ಟು ಹಾಕಿದರು.



'ಬಡವರ ಮಕ್ಕಳು ಬೆಳೀಬೇಕು' ಎನ್ನುವ ಧನಂಜಯ್

# ಹೊಸಬರ ಸಾವು ಬಯಸುವವರು ಸ್ವತಃ ನೀಟಾಗಿ ಸಾಯಬೇಕು

—ಯೋಗರಾಜ ಭಟ್

ಹೊಸಬರಿಗೆ ಪ್ರೋತ್ಸಾಹ ಕೊಡದೇ ಇರುವುದರಿಂದ ಈಗ ಪ್ರಸ್ತಾಪಿಸಿರುವ ಸಮಸ್ಯೆ ಉದ್ಭವಿಸಿರಬಹುದು. ಹೊಸಬರು ಎಲ್ಲಿ ಇರುತ್ತಾರೋ, ಹೊಸದು ತಾನಾಗಿಯೇ ಹುಟ್ಟಿಕೊಳ್ಳುತ್ತದೆ. ಅದೆಲ್ಲ ನಮ್ಮ ಕೆಲಸ ಅಲ್ಲ ಅಂತ ಕೈತೊಳೆದುಕೊಂಡ ಉದ್ಯಮದ ಮಂದಿಯಿಂದಲೇ ನಮ್ಮೂರಿನಲ್ಲಿ ದೊಡ್ಡ ತಪ್ಪು ಆಗಿದೆ ಅನಿಸುತ್ತೆ. ಅದಕ್ಕೇ ಹೊಸತನ ಪಕ್ಕದ ಊರಿನ ಸಿನಿಮಾಗಳಲ್ಲಿ ಹುಡುಕಿ ನೋಡುವ ಕಾಲ ಬಂದಿರಬಹುದು ನಮ್ಮ ಜನರಿಗೆ. ಮನೆಯಲ್ಲಿ ಅಡುಗೆ ರುಚಿ ಸಿಗಲಿಲ್ಲವೆಂದರೆ, ಹೋಟೆಲ್ ಹುಡುಕುತ್ತವೆ ಮಕ್ಕಳು!

ನಮ್ಮ ಊರಲ್ಲಿ ಇವತ್ತಿನ ದಿನ ಯಾರೂ ಹೊಸಬರನ್ನು ಮಾತನಾಡಿಸಲು ಸಿದ್ಧರಿಲ್ಲ ಎನ್ನುವ ಭಾವನೆ ಇದೆ (ಹೊಸಬರು ಕೂಡ ಯಾರ ಮಾತೂ ಕೇಳೊಲ್ಲ; ಅದು ಬೇರೆ ವಿಷಯ. ನಟ–ನಟಿಯರಲ್ಲಿ ಸೂಕ್ಷ್ಮತೆ ಹಾಗೂ ಸಾಮಾಜಿಕ ಪ್ರಜ್ಞೆಯ ಕೊರತೆ ವಿಪರೀತ ಇದೆ).

ಒಟ್ಟಿನಲ್ಲಿ ಹೊಸಬರ ಹತ್ತಿರ ಹೋಗೋಕೆ ಕೂಡ ಯಾರಿಗೂ ಧೈರ್ಯ ಇಲ್ಲ. ಎಲ್ಲ ರೀತಿಯ ಮಾರುಕಟ್ಟೆ ಸತ್ತಿದೆ ಅಂತ ಭಯ ಬೇರೆ ಹುಟ್ಟಿಸುತ್ತಾರೆ. ಅದಕ್ಕೇ ನಾನು ಭಯಂಕರ ಧೈರ್ಯ ಮಾಡಿ ನಾಲ್ಕು ಜನ ಹೊಸಬರ ಸಿನಿಮಾಗೆ ನಾಲ್ಕು ಜನ ನಿರ್ದೇಶಕರು ಹಾಗೂ ಅಷ್ಟೇ ಸಂಖ್ಯೆಯ ನಿರ್ಮಾಪಕರಿಗೆ ಸಾಥಿಯಾಗಿ ಹೋರಾಟದ ರೀತಿಯಲ್ಲಿ ಜತೆಗೆ ನಿಂತಿದ್ದೇನೆ. ಕೈಲಾದದ್ದು ಮಾಡಬೇಕೆಂಬ ಆಸೆ.



ನಾನು ಇದುವರೆಗೆ ಮಾಡಿರುವುದು ಹೆಚ್ಚೂಕಮ್ಮಿ ಇದೇ ಹೊಸಬರ ಕೆಲಸ. ಬಹುಶಃ ಹೊಸಬರಿಂದಲೇ ಇದಕ್ಕೆಲ್ಲ ಉತ್ತರ ಸಿಗುತ್ತದೆ ಎನ್ನುವುದು ನನ್ನ ವೈಯಕ್ತಿಕ ಅನಿಸಿಕೆ ಹಾಗೂ ಆಶಾಭಾವನೆ. ಇದೆಲ್ಲ ಸಮಸ್ಯೆಗಳಿಗೆ ಪಾಪ ಸ್ಟಾರ್‌ಗಳು ಏನು ತಾನೆ ಮಾಡಿಯಾರು? ಅವರನ್ನು ಎಲ್ಲದಕ್ಕೂ ಎಳೆಯುವುದು ತಪ್ಪು. ತೀರ ಕಷ್ಟದ ಹಾದಿಯಲ್ಲಿ ಎಷ್ಟೋ ಅವಮಾನ ನೋಡಿದ ನಂತರ ಅವರು ಸ್ಟಾರ್ ಆಗಿರುತ್ತಾರೆ. ವರ್ಷದ ಎಲ್ಲ ಸಿನಿಮಾಗಳನ್ನೂ ಸ್ಟಾರ್‌ಗಳೇ ಮಾಡಲು ಸಾಧ್ಯವಿಲ್ಲ. ಅವರ ದಾರಿ ಅವರದು. ಅವರ ಯಶಸ್ಸು, ನೋವು–ನಲಿವು ಕೇವಲ ಅವರದು. ಸ್ಟಾರ್ ಇರುವ ಸಿನಿಮಾ ಗೆಲ್ಲಲಿ, ಸೋಲಲಿ... ಅದಕ್ಕೆ ಅವನೇ ಕಾರಣ; ಅಲ್ಲಿ ಬೇರೆ ಎಲ್ಲ ನಗಣ್ಯ.

ನಾವೆಲ್ಲ ಕೈಲಿ ಆದಷ್ಟು ಸಣ್ಣ ಪುಟ್ಟ ಹೊಸ ಸ್ಟಾರ್‌ಗಳನ್ನು ಹುಟ್ಟಿಸಬೇಕು. ಆ ಕೆಲಸ ಇಲ್ಲಿ ಆಗುತ್ತಾ ಇಲ್ಲ. 'ನಮಗೇನೇ ಬದುಕೋಕೆ ಆಗ್ತಾ ಇಲ್ಲ, ಸಾಯಲಿ ಬಿಡಿ ಹೊಸಬರು' ಎಂಬ ವಾಕ್ಯವನ್ನು ತುಂಬ ಕಡೆ ತುಂಬ ಜನರ ಬಾಯಲ್ಲಿ ಕೇಳಿರುವೆ.

ಇಲ್ಲಿ ಹೊಸಬರ ಸಾವು ಬಯಸುವ ಮಂದಿ ಎಲ್ಲಿಯವರೆಗೆ ನೀಟ್ ಆಗಿ ಸ್ವತಃ ಸಾಯುವುದಿಲ್ಲವೋ ಅಲ್ಲಿಯವರೆಗೆ ಇದು ಹಳೆ ಕಥೆ ಹಾಗೂ ಕಂತೆ ಪುರಾಣಗಳ ಗಬ್ಬು ನಾರುವ ಜಾಗ ಆಗಿಯೇ ಇರುತ್ತದೆಂದು ಕಾಣುತ್ತದೆ. ಬಾಕಿ ಸುಗಂಧಕ್ಕೆ ಕಾದು ನೋಡಬೇಕು... ನಾಡಿನ ಜನ ಯಾವತ್ತೂ ಕೈ ಬಿಡುವುದಿಲ್ಲ. ಅವರಿಗೆ ಸ್ವಾದಿಷ್ಟ ಹಾಗೂ ಸುಗಂಧಭರಿತ ಸಿನಿಮಾಗಳನ್ನು ನಾವೆಲ್ಲ ಸೇರಿ ಕೊಡಬೇಕು. ನೆಟ್ಟಗೆ ಪ್ರಮೋಷನ್ ಮಾಡಬೇಕು (ಪ್ರಮೋಷನ್ ಎಂಬ ಬ್ರಹ್ಮವಿದ್ಯೆ ಸುಮಾರು ಜನರಿಗೆ ಗಗನಕುಸುಮ).

ಥಿಯೇಟರ್‌ಗೆ ಜನ ಖಂಡಿತ ಬರುತ್ತಾರೆ. ಬೇರೆ ಎಲ್ಲ ಬರೀ ಮಾತು ಅಷ್ಟೆ.